Doc-52
1-P 2

(1)

Reg no KRNN 12 - For Influential Publicity - 10-9-76

ಕೃಷ್ಣ ಮಹೋತ್ಸವ ನೆರವೇರಿಸಿ ವಜ್ರಮಹೋತ್ಸವ ನೇರವೇರಿಸಲಿರುವ ಪತ್ರಿಕೆ

ಸತ್ಯವಾದಿ
SATYAVADI

60th Diamond Jubilee Year
60 ನೇ ವಜ್ರಮಹೋತ್ಸವ ವರ್ಷ
★ Satyavadi Daily. Mysore 4 ★

ಸಂಸ್ಥಾಪಕರು : ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್

ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್

15 ಪೈಸೆ

ಬಟ್ಟೆಗೆ ರಫ್ತು ಇತ್ತಿರುವ ಆರ್ಡರು

ಕಲ್ಕತ್ತಾ — ರಫ್ತುದಾರರು ಈ ವರ್ಷ ಭಾರತದ ಅರವತ್ತು ಮಿಲಿಯ ಬಟ್ಟೆಗೆ ಆರ್ಡರ್ ಕೊಟ್ಟಿದೆ

●

ಹೆಚ್ಚಾದ ಹೊಗೆಸೊಪ್ಪಿನ ಬೆಳೆಯ ನಿರೀಕ್ಷೆ

ಮೈಸೂರು — ಈ ಜಿಲ್ಲೆಯಲ್ಲಿ ಬಹು ಹೆಚ್ಚಾದ ಹೊಗೆಸೊಪ್ಪಿನ ಬೆಳೆಯ ನಿರೀಕ್ಷೆ ಇದೆ.

●

ಈ ತಿಂಗಳಿನ ಪಡಿತರ ಬಿಡುಗಡೆ

ಮೈಸೂರು — ಪಗರವ ಕಾರ್ಡುದಾರರಿಗೆ ಈ ತಿಂಗಳು ಸಕ್ಕರೆ ಮುಂತಾದವು ಬಿಡುಗಡೆ ಮಾಡಲಾಗಿದೆ

★

ಭಾರತ ಸ್ಪರ್ಧೆಗೆ ಸಿಲ್ಲಲಿದೆ

ವಿಶ್ವಸಂಸ್ಥೆ — 25 ದೇಶಗಳ ತಂತರರಾಷ್ಟ್ರೀಯ ಲಾ ಕಮೀಷನ್ ಆಯೋಗದ ಒಂದು ಸ್ಥಾನಕ್ಕೆ ಭಾರತ ಸ್ಪರ್ಧಿಸಲಿದೆ.

★

ಬಚ್ಚಲಲ್ಲಿ ಇಟ್ಟಿದ್ದ ಸಂಪತ್ತು ಪತ್ತೆ

ಪಾಕೀಸ್ತಾನದ ಬಚ್ಚಲಲ್ಲಿ ಇಡಲಾದ ಸಂಪತ್ತನ್ನು ಪತ್ತೇ ಮಾಡುವುದರಲ್ಲಿ ಮಹಾರಾಜ ಅಧ್ಯಕ್ಷ ಜನರಲ್ ಯಾಹ್ಯ ಖಾನ್ ನ್ಯಾಯಬಾಹಿರವಾಗಿ ಅಪಾರ ಸಂಪತ್ತನ್ನು ಶೇಖರಿಸಿರುವುದು ಪತ್ತೆ ಆಗಿದೆ

★

ಪುರುಷರ ಕೇಶಾಲಂಕಾರ ಸ್ಪರ್ಧೆ

ಭಾವನಗರ — ಇಲ್ಲಿಯ ಯುವಕ ಸಂಘ ಪುರುಷರ ಕೇಶಾಲಂಕಾರ ಸ್ಪರ್ಧೆ ಏರ್ಪಡಿಸಿತ್ತು. ಅದರಲ್ಲಿ ವಿವಿಧ ರೀತಿಯ ಕ್ರಾಪ್ ಅಲಂಕಾರದವರು ಭಾಗವಹಿಸಿದ್ದರು. ಈ ಸ್ಪರ್ಧೆಯಲ್ಲಿ ಬಹುಮಾನ ಪಡೆದರು.

○

ಪುರಾಣ ಕಾಲದಲ್ಲಿ ಹಾವಿನ ಹಾಡರಿ

ಶಿವಮೊಗ್ಗ — ಹೊನ್ನಾಳಿ ಹತ್ತಿರ ಬೇಲೂರು ಗ್ರಾಮದಲ್ಲಿ ಶ್ರೀ ಸಿದ್ದಲಿಂಗೇಶ್ವರ ಪುರಾಣ ನಡೆಯುತ್ತಿದ್ದು, ಪುರಾಣ ಶ್ರವಣದಲ್ಲಿ ನಾಗರ ಹಾವೊಂದು ಬಂದು, ಹೆಡೆ ಆಡಿಸುತ್ತ ಎಂಗಳಾಡಿ ಆಗುವ ತನಕ ಇದ್ದು ನಂತರ ಹೊರಟು ಹೋಗುತ್ತಿತ್ತೆಂದು ಎಚ್ಚಂಕೆ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.

★ 5 ಲಕ್ಷ ಬೀಡಿ ಕಾರ್ಮಿಕರು 7 ವರೆ ಕೋಟಿ ರೂಪಾಯಿಗಳನ್ನು ಬೋನಸ್, ವೇತನ ಮತ್ತು ರಜದೊಡನೆ ಪಡೆಯಲಿರುವರು ಎಂದು ಬೆಂಗಳೂರು ವಾರ್ತೆ.

ಸತ್ಯವಾದಿ 60 ನೇ ವರುಷಕ್ಕೆ

60 ನೇ ವರ್ಷಕ್ಕೆ ಪದಾರ್ಪಣ ಮಾಡಿರುವ ಮೈಸೂರಿನ "ಸತ್ಯವಾದಿ" ದಿನಪತ್ರಿಕೆ ಇನ್ನೂ ಚಿರಕಾಲ ಕನ್ನಡ ನಾಡಿಗೆ ಸೇವೆ ಸಲ್ಲಿಸಲಿ ಎಂದು ಹಾರೈಸುತ್ತೇವೆ

ಸಂಪಾದಕ
ಜಾವಟಿ ದಿನಪತ್ರಿಕೆ
ಶಿವಮೊಗ್ಗ

ಮೇಲ್ಕಂಡಂತೆ ತಮ್ಮ ಘನ "ಜಾವಟಿ" ದಿನಪತ್ರಿಕೆಯಲ್ಲಿ "ಸತ್ಯವಾದಿ" ಬಗ್ಗೆ ಶುಭಾಶಯ ಪ್ರಕಟಣೆ ಮಾಡಿರುವುದಕ್ಕೆ ಆ ಪತ್ರಿಕೆಯ ಸಂಪಾದಕರಿಗೆ ಕೃತಜ್ಞತಾ ಪೂರ್ವಕ ವಂದನೆಗಳು.

ಸಂಪಾದಕರು "ಸತ್ಯವಾದಿ"

ಸರ್ಕಾರಕ್ಕೆ ಮನವಿ

ಬೆಂಗಳೂರು — ಕರ್ನಾಟಕ ಬಳಕೆದಾರರ ರಂಗ ನ್ಯಾಯ ಬೆಲೆಯ ಅಂಗಡಿಗಳ ಮೂಲಕ ಕಾರ್ಡುದಾರರಿಗೆ ಕಡಲೇ ಕಾಯಿ ಎಣ್ಣೆ ಮಾರುವ ವಿಚಾರವನ್ನು ಮಾಡಲು ಸರ್ಕಾರಕ್ಕೆ ಮನವಿ ಮಾಡಿದೆ.

★

ಆರೋಗ್ಯ ಮಂತ್ರಿ ಶ್ರೀ ಹೆಚ್ ಎಂ ಚನ್ನಬಸಪ್ಪನವರು ಸರ್ಕಾರಿ ವೈದ್ಯರು ಖಾಸಗಿ ವೃತ್ತಿ ನಡೆಸುವುದನ್ನು ನಿಷೇಧಿಸಲು ಯೋಚಿಸಿರುವರು

ಮಾವೋರ ನಿಧನ

ನವ ದೆಹಲಿ — ನವ ಚೀನಾ ಅಧ್ಯಕ್ಷ ಮಾವೋ ತ್ಸೆ ತುಂಗ್ ನಿನ್ನೆ ಮಧ್ಯ ರಾತ್ರಿ ಅನಂತರ ನಿಧನರಾದರು ಭಾರತ ಅಧ್ಯಕ್ಷರು ಮತ್ತು ಪ್ರಧಾನರು ಸಂತಾಪ ಸೂಚಿಸಿರುವರು.

ಮಳೆ ನೋಡಲು ಬಂದರು

ಪುಣೆ — ಅರಬ್ ಹಾಗೂ ಕೊಲ್ಲಿ ದೇಶಗಳ ಕೆಲವು ಪ್ರವಾಸಿಕರು, ಭಾರತಕ್ಕೆ ಕೇವಲ ಮಳೆ ನೋಡಲು ಬಂದಿದ್ದರೆಂದು ಅವರ ಜೀವಮಾನದಲ್ಲೇ ಮಳೆ ಕಂಡಿಲ್ಲವೆಂದು ಪ್ರವಾಸಿ ಮಂತ್ರಿ ಶ್ರೀ ರಾಜಬಹದೂರ್ ತಿಳಿಸಿದರು.

ಅವಳಿ ಜವಳಿ ಮಕ್ಕಳು

ಗುಡಿಬಂಡ — ಹೊಸೂರು ಗ್ರಾಮದ ಮೂವತ್ತು ವರ್ಷದ ಓರ್ವ ಮಹಿಳೆ ವಿಚಿತ್ರ ಅವಳಿ ಜವಳಿ ಮಕ್ಕಳಿಗೆ ಜನನ ಇತ್ತಿರುವರು ಅವು ಕತ್ತಿನ ವರೆಗೆ ಒಟ್ಟಾಗಿದ್ದು 4 ಕಿವಿ 4 ಕೈ ಮತ್ತು 2 ತಲೆಗಳಿದ್ದವು ಅವು ಅರ್ಧ ಗಂಟೆಯಲ್ಲಿ ಮರಣ ಹೊಂದಿದವು ಗೌರಿಬಿದನೂರಿನ ಸ್ಯಾಷನಲ್ ಕಾಲೇಜ್‌ನಲ್ಲಿ ಇಡಲಾಗಿದೆ.

● ಕಾಂಗ್ರೆಸ್ ನಿಧಿಗೆ ಓರ್ವ ಬಡವನಿಂದ ಮೂವತ್ತು ಪೈಸೆಗಳನ್ನು ಕಾಂಗ್ರೆಸ್ ಖಜಾಂಚಿ ಮತ್ತು ಮಂತ್ರಿ ಶ್ರೀ ಪಿ ಸಿ. ಸೇಥಿ ರಶ್ಮಿಮ ನಿರ್ಮಾರ್ ಜಿಲ್ಲೆಯ ಪ್ರವಾಸದಲ್ಲಿ ತಿಳಿಸಿದರು

★

MYSORE RACES 1976

SATURDAY 11th September

SUNDAY 12th September

(The Mysore 1000 Guineas 1976)

★

ವಿದೇಶಿ ಸಿಗರೇಟುಗಳ ವಶ

ಮದರಾಸು — ಪೋಲೀಸರು 1 ಟ್ಯಾಕ್ಸಿಯನ್ನು 3 ಮೈಲಿ ಅಟ್ಟಿಕೊಂಡು ಹೋಗಿ ಹಿಡಿದು ಅದರಲ್ಲಿದ್ದ 95 ಪ್ಯಾಕೆಟ್ ವಿದೇಶೀ ಸಿಗರೇಟು ವಶಪಡಿಸಿಕೊಂಡರು ಟ್ಯಾಕ್ಸಿ ಪಶಪಡಿಸಿಕೊಂಡು ಇಬ್ಬರ ಬಂಧನವಾಯಿತು,

○

ಕಾಂಗ್ರೆಸ್ ಕಿಸಾನ್ ಸಮಿತಿಯವರಿಂದ ದಾಖಲೆ ಸ್ಥಾಪನೆ

ಶಿವಮೊಗ್ಗ — ಈ ಜಿಲ್ಲೆಯ ಕಾಂಗ್ರೆಸ್ ಕಿಸಾನ್ ಸಮಿತಿ ನಾಯಕರು 5 ನೂರು ಗ್ರಾಮಗಳಿಗೆ ಭೇಟಿ ಇತ್ತು ದಾಖಲೆ ಸ್ಥಾಪಿಸಿರುವರು ಈ ಸವ ನೆನವಾಗಿ ಕೊನಿಗೆರೆ ಗ್ರಾಮದಲ್ಲಿ ರೈತರ ಮೇಳನ ಏರ್ಪಡಿಸಲಾಗಿತ್ತು.

ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ "ಸತ್ಯವಾದಿ" ಯು 60 ನೇ ವರ್ಷ ಅರ್ಥಾತ್ ವಜ್ರ ಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಸ್ವರ್ಣಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಷ್ಟ್ರದ ಪ್ರಪ್ರಥಮ ವಜ್ರ ಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ

Contribute Liberally to the National Defence Fund

ಗೋರಕ್ಷಣ'ಕ್ಕೆ ನೆಕಲ ನೆರವು ನೀಡಿ

ಗೋರಕ್ಷಣೆ ಪ್ರಾಣಿದಯ, ಇತ್ಯಾದಿ ಪವಿತ್ರ ಧ್ಯೇಯಗಳ ಪ್ರಚಾರ ಪತ್ರಿಕೆಗಳು ರಾಷ್ಟ್ರದಲ್ಲಿ ಕೆಲವೇ ಇದ್ದು, ಧಾರ್ಮಿಕ ಪತ್ರಿಕೆಗಳು ಹೆಚ್ಚು ಕಾಲಂಬದುಕಿ ಬಾಳುವ ದು ಅಸಾಧಾರಣವಾಗಿರುವಾಗ್ಯೂ "ಗೋರಕ್ಷಣ" ವು ತನ್ನ ಬೆಳ್ಳಿ ಹಬ್ಬ ನೆರವೇಗಿ ರುವದು ಹರ್ಷದಾಯಕವಾಗಿದೆ. ಧರ್ಮಾಭಿಮಾನಿಗಳೆ, ಗೋಮಾತೆ ಭಕ್ತರೂ, ಪ್ರಾಣಿದಯಾಖಂರೂ ಜಾತಿ, ಮತ, ಭಾಷೆ ಬೇಧಭಾವವಿಲ್ಲದೆ, 'ಗೋರಕ್ಷಣ" ದ ಅಭಿವೃದ್ಧಿ ಸಂದೇಶ ಮತ್ತು ಧನ ನೆರವನ್ನು ನೀಡಬೇಕೆಂದು ವಿನಂತಿಸುತ್ತೇವೆ

"ಗೋರಕ್ಷಣ" ಬೆಳ್ಳಿ ಹಬ್ಬ ಮತ್ತು ಅದರ ಅಭಿವೃದ್ಧಿಗೆ ಉದಾರ ನೆರವು ನೀಡಿರುವವರಿಗೆಲ್ಲಾ ಕೃತಜ್ಞತಾಪೂರ್ವಕ ವಂದನೆಗಳು

ಸಂಪಾದಕ, ಗೋರಕ್ಷಣ ಪತ್ರಿಕೆ, ಚಾಮರಾಜಪುರಂ, ಮೈಸೂರು 4

ಭಾರತದಲ್ಲಿ ಗೋವಧೆ ಪೂರ್ಣ ನಿಶೇಧವಾಗಲಿ

Protect the Cow

ವುಡ್‌ಲ್ಯಾಂಡ್ 10 9 76 ರಿಂದ

ಅವೋಘ 2 ನೇ ವಾರ

ಡನ್ ನಂಬರಿ

ಹಿಂದಿ ಕಲರ್

ಮನೋಜ್ ಕುಮಾರ್ ಹೇಮಮಾಲಿನಿ

ಪ್ರೇಮನಾಥ್ ಪ್ರಾಣ್ ಮುಂತಾದವರ ಅಭಿನಯ

ದಿನ: 3 ಪ್ರದರ್ಶನಗಳು

ಅಪೆರಾ 10 9 76 ರಿಂದ

ಒಂದೇ ರೂಪ ಎರಡು ಗುಣ

ವಿಷ್ಣುವರ್ಧನ್ (ದ್ವಿಪಾತ್ರ) ಚಂದ್ರಕಲಾ ಅಭಿನಯ

ಕನ್ನಡ ಕಲರ್ ಪ್ರತಿ ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Edited Printed and Published by Dharmaprachara Rata M S. Krishna Rao (Proprietor) at the Satyavadi Press, Chamarajapuram Mysore 4